ಏರೋವಿಲೊ ಕಂಪೆನಿಗೂ ಒಂದು ಇತಿಹಾಸವಿದೆ. 2013ರಲ್ಲಿ, ಆಗಸದಲ್ಲಿ ಅತಿಹೆಚ್ಚು ಹೊತ್ತು ನಿಲ್ಲಬಲ್ಲ ಮಾನವ ಚಾಲಿತ ಹೆಲಿಕಾಪ್ಟರ್ ನಿರ್ಮಾಣದ ತಂತ್ರಜ್ಞಾನಕ್ಕಾಗಿ 2.5 ಲಕ್ಷ ಅಮೆರಿಕನ್ ಡಾಲರ್ ಬಹುಮಾನ ಗೆದ್ದ ಕಂಪೆನಿಯದು. ಆ ಕಂಪೆನಿಯಿಂದ ಹಲವು ತಂತ್ರಜ್ಞರನ್ನು ಲ್ಯಾರಿ ಪೇಜ್ ಸೆಳೆದುಕೊಂಡಿದ್ದಾರೆ. ಗೂಗಲ್‌ನಲ್ಲಿ ಸ್ವಯಂಚಲಿಸುವ ಕಾರನ್ನು ಕಂಡುಹಿಡಿದ ಕೀರ್ತಿಯ ಎನ್ರಿಕ್ ಒಶಿರೊ ಎಂಬ ಎಂಜಿನಿಯರ್ ಕಿಟ್ಟಿ ಹಾಕ್‌ನಲ್ಲಿದ್ದಾರೆ. ಈ ಎರಡೂ ಕಂಪೆನಿಗಳ ಬಗ್ಗೆ ಹೆಚ್ಚಿನ ಮಾಹಿತಿ ಎಲ್ಲೂ ಸಿಗುವುದಿಲ್ಲ. ಈ ಎರಡು ಕಂಪೆನಿಗಳ ಹಾರುವ ಕಾರುಗಳ ಉತ್ಪಾದನೆ ಯಾವ ಹಂತದಲ್ಲಿದೆ ಎನ್ನುವ ವಿವರಗಳೂ ಲಭ್ಯವಿಲ್ಲ. ಇನ್ನು ಹತ್ತು ವರ್ಷಗಳಲ್ಲಿ ಹಾರುವ ಕಾರುಗಳು ವಾಣಿಜ್ಯ ಬಳಕೆಗೆ ಸಿದ್ಧವಾಗಲಿವೆ ಎನ್ನುವ ಭರವಸೆ ಬಿಟ್ಟರೆ ಇತರ ಯಾವುದೂ ಖಚಿತವಿಲ್ಲ.

## ನಿಲ್ಲದ ಪ್ರಯತ್ನ

ಹಾರುವ ಕಾರು ತಯಾರಿಕೆಯ ಬಗ್ಗೆ ಬಹಿರಂಗವಾಗಿ ಮಾತನಾಡುತ್ತಿರುವ ಇತರ ಕಂಪೆನಿಗಳೆಂದರೆ ಮೆಸಚುಸೆಟ್ಸ್ ಮೂಲದ ಟೆರ್ರಾಫ್ಯುಗುವ ಮತ್ತು ಸ್ಲೊವಾಕಿಯ ಮೂಲದ ಏರೊಮೊಬಿಲ್. 2006ರಲ್ಲಿ ಆರಂಭವಾದ ಟೆರ್ರಾಫ್ಯುಗುವ ಕಂಪೆನಿಯು ವಿಭಿನ್ನ ಮಾದರಿಯ ಹಾರುವ ಕಾರುಗಳ ತಯಾರಿಕೆಯಲ್ಲಿ 55 ಲಕ್ಷ ಅಮೆರಿಕನ್ ಡಾಲರ್ ಬಂಡವಾಳ ತೊಡಗಿಸಿದೆ. ಮಡಚುವ ರೆಕ್ಕೆಗಳುಳ್ಳ ವಿಮಾನ ಮಾದರಿಯ ಹಾರುವ ಕಾರುಗಳನ್ನು ನಿರ್ಮಿಸಿರುವ ಈ ಕಂಪೆನಿ, ರೆಕ್ಕೆಗಳಿಲ್ಲದ ಕಾರುಗಳನ್ನು ತಯಾರಿಸಲು ಯತ್ನಿಸುತ್ತಿದೆ.

ಸ್ಲೊವಾಕಿಯ ಮೂಲದ ಏರೊಮೊಬಿಲ್ ಇದೇ ಮಾದರಿಯ ಹಾರುವ ಕಾರುಗಳನ್ನು ಮೊದಲು ಉತ್ಪಾದಿಸಿದ ಕಂಪೆನಿ. ಅದು ಕಳೆದ ವರ್ಷ ಬಿಡುಗಡೆ ಮಾಡಿದ ಏರೊಮೊಬಿಲ್3 ವಿಮಾನ ಯಾನ ಕಾರಿನ ಸ್ವರೂಪವನ್ನೇ ಉಳಿಸಿಕೊಂಡಿದೆ. ಆದರೆ ಮುಂದಿನ 23 ವರ್ಷಗಳಲ್ಲಿ ರೆಕ್ಕೆಗಳಿಲ್ಲದ ಸರಳ ಹಾರುವ ಕಾರನ್ನು ತಯಾರಿಸುವ ವಿಶ್ವಾಸವನ್ನು ಕಂಪೆನಿ ವ್ಯಕ್ತಪಡಿಸಿದ್ದು, 4 ಲಕ್ಷ ಡಾಲರ್‌ಗಳ ಬೆಲೆಯನ್ನೂ ಪ್ರಕಟಿಸಿದೆ. ಈ ವರ್ಷವೇ ಬುಕಿಂಗ್ ಆರಂಭವಾಗಲಿದೆ ಎಂದೂ ಹೇಳಿದೆ.

1983ರಲ್ಲಿ ಆರಂಭವಾದ ಮೊಲ್ಲರ್ ಇಂಟರ್‌ನ್ಯಾಷನಲ್ ಕಾರು ಕಂಪೆನಿಯೂ ರೆಕ್ಕೆಗಳುಳ್ಳ ಹಾರುವ ಕಾರುಗಳನ್ನು ಉತ್ಪಾದಿಸುತ್ತಿದೆ. ಅದರ ಸ್ಕೈಕಾರ್ 200 ಬ್ರ್ಯಾಂಡ್ ಅತ್ಯಂತ ಹಗುರವಾಗಿದ್ದು ಇಬ್ಬರು ಪ್ರಯಾಣಿಸಬಹುದು. ಶೀಘ್ರವೇ ಈ ಕಾರುಗಳನ್ನು ಪ್ರಯಾಣಿಕ ಮಾರುಕಟ್ಟೆಗೆ ಬಿಡುವುದಾಗಿ ಕಂಪೆನಿ ಪ್ರಕಟಿಸಿದೆ. ಫ್ರಾನ್ಸ್‌ನ ಸಶಸ್ತ್ರ ಪಡೆಗಳ ಬೆಂಬಲದೊಂದಿಗೆ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎಕ್ಸ್‌ಪ್ಲೋರ್‌ಏರ್ ಕಂಪೆನಿ, 2017ರಲ್ಲಿ ಪ್ಯಾರಿಸ್ ಏರ್‌ಷೋನಲ್ಲಿ ತನ್ನ ಮೊದಲ ಹಾರುವ



ಕಾರನ್ನು ಪ್ರದರ್ಶಿಸುವ ವರದಿಗಳಿವೆ. ಡಚ್ ಕಂಪೆನಿ ಪಾಲ್‌ವಿ ಮತ್ತು 2009ರಲ್ಲಿ ಆರಂಭವಾದ ಜೋಬಿ ಏವಿಯೇಶನ್ ಕೂಡಾ ಹಾರುವ ಕಾರುಗಳ ತಯಾರಿಕೆಯ ವಿವಿಧ ಹಂತಗಳಲ್ಲಿ ತೊಡಗಿವೆ.

ರೆಕ್ಕೆಗಳುಳ್ಳ ವಿಮಾನ ಯಾನೆ ಕಾರುಗಳ ಮಾರುಕಟ್ಟೆಯ ಪ್ರಶ್ನೆಯೂ ಮಹತ್ವದ್ದೇ. ಸದ್ಯದ ಮಾಹಿತಿಗಳ ಪ್ರಕಾರ, ಈ ರೀತಿಯ ಕಾರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಷ್ಟ. ಅದೇನಿದ್ದರೂ ಭಾರೀ ಶ್ರೀಮಂತರು ಮತ್ತು ಮಿಲಿಟರಿಗಳಿಗೆ ಮಾತ್ರ ಸೂಕ್ತವಾದದ್ದು ಎನ್ನುವ ವರದಿಗಳಿವೆ. ಈ ಕಾರುಗಳ ಬುಕಿಂಗ್ ಕುರಿತ ನಿರುತ್ಸಾಹ ಕೂಡಾ ಹೂಡಿಕೆದಾರರಿಗೆ ಚಿಂತೆ ಉಂಟು ಮಾಡಿದೆ. ಹಾಗೆಂದೇ ವಾಣಿಜ್ಯ ಬಳಕೆಗೆ ಒಗ್ಗುವ ರೆಕ್ಕೆಗಳಿಲ್ಲದ ಹಾರುವ ಕಾರುಗಳ ಉತ್ಪಾದನೆಯತ್ತ ಜಗತ್ತಿನ ಚಿತ್ತ ನೆಟ್ಟಿದೆ.

ಈ ಯತ್ನದಲ್ಲಿ ತೊಡಗಿರುವ ಉಳಿದೆಲ್ಲ ಕಂಪೆನಿಗಳ ಬಗ್ಗೆ ಅಷ್ಟೊಂದು ಆಶಾವಾದವನ್ನು ಇಟ್ಟುಕೊಳ್ಳುವುದು ಕಷ್ಟವಾದರೂ, ಝೀ ಏರೊ ಮತ್ತು ಕಿಟ್ಟಿ ಹಾಕ್ ಕಂಪೆನಿಗಳ ಪ್ರಯತ್ನವನ್ನು ಅಷ್ಟು ಲಘುವಾಗಿ ಪರಿಗಣಿಸಲು ಈ ಕ್ಷೇತ್ರದ ತಜ್ಞರು ಸಿದ್ಧರಿಲ್ಲ. ಆದರೆ ಪ್ರಯಾಣಿಕ ಸ್ನೇಹಿ ಹಾರುವ ಕಾರು ನಿಜಕ್ಕೂ ಮಾರುಕಟ್ಟೆಗೆ ಯಾವಾಗ ಬರುತ್ತದೆ ಎನ್ನುವುದನ್ನು ಖಚಿತವಾಗಿ ಈಗಲೇ ಹೇಳಲು ಸಾಧ್ಯವಿಲ್ಲ. 2026ಕ್ಕೆ ಖಂಡಿತ ಬರಲಿದೆ ಎಂದು ಲ್ಯಾರಿ ಪೇಜ್ ಕಂಪೆನಿಯ ವಕ್ತಾರರು ಗಾಳಿಸುದ್ದಿಗಳನ್ನು ತೇಲಿಬಿಟ್ಟಿದ್ದಾರೆ. ಆದರೆ ತಜ್ಞರ ಪ್ರಕಾರ ಇನ್ನೂ 1520 ವರ್ಷಗಳಾದರೂ ಬೇಕು.


